ವಿಶ್ವವಾಣಿ

ಸಂಪಾದಕೀಯ

ಕಳವಳದಿಂದ ದೂರ ಕಣಿವೆ ರಾಜ್ಯ

ಸರಕಾರಿ ಅಂಕಿ ಅಂಶಗಳನ್ನು ನಂಬಬಹುದಾದರೆ ಇದು ಸ್ವಾಗತಾರ್ಹ ಬೆಳವಣಿಗೆ. ಯಾವುದೇ ದೃಷ್ಟಿಯಿಂದ ನೋಡಿದರೂ ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿದ್ದ 370ನೇ ವಿಧಿ ರದ್ದಾಗಿದ್ದು ಬಹಳ ದೊಡ್ಡ ಘಟನೆ. ಇದರಿಂದಾಗಿ ಕಾಶ್ಮೀರ ಕಣಿವೆಯಲ್ಲಿ ಮಹತ್ತರ ಬದಲಾವಣೆ ಆಗುವ ನಿರೀಕ್ಷೆಯಂತೂ ಇತ್ತು. ಆರ್ಟಿಕಲ್ 370 ಮತ್ತು 35(ಎ) ರದ್ದಾಗಿ ಇಂದಿಗೆ (2019, ಆಗಸ್ಟ್ 5ಕ್ಕೆ)ಸರಿಯಾಗಿ ಮೂರು ವರ್ಷ. ಈಗ ಮೂರು ವರ್ಷದಲ್ಲಿ ಕಣಿವೆ ರಾಜ್ಯದಲ್ಲಿ ಎಷ್ಟು ಬದಲಾಗಿದೆ ಎಂಬ ಬಗೆಗೆ ಸಹಜ ಕುತೂಹಲವಂತೂ ಇದೆ. ಭಯೋತ್ಪಾದನೆ ಚಟುವಟಿಕೆ ಬಹುತೇಕ ನಿಂತಿದೆ ಎಂದು ಸರಕಾರ ಹೇಳಿಕೊಳ್ಳುತ್ತಿದೆಯಾದರೂ ಇತ್ತೀಚೆಗೆ ಕಾಶ್ಮೀರೇತರರ ಮೇಲೆ ಉಗ್ರರ ದಾಳಿ ಪ್ರಕರಣ ಹೆಚ್ಚುತ್ತಿರುವುದಂತೂ ಸತ್ಯ. ಜಮ್ಮು ಮತ್ತು ಕಾಶ್ಮೀರದ ಪ್ರಮುಖ ಆದಾಯ ಮೂಲವಂತೂ ಪ್ರವಾಸೋದ್ಯಮವೊಂದೇ. ಇಂಥ ಬೆಳವಣಿಗೆಗಳ ನಡುವೆಯೂ ಜನರು ಕಣಿವೆ ರಾಜ್ಯದತ್ತ ಪ್ರವಾಸ ಹೋಗುತ್ತಿದ್ದಾರಾ ಎಂಬ ಪ್ರಶ್ನೆಗೆ ಜಿ ಕಿಶನ್ ರೆಡ್ಡಿ, ಹೌದು ಎನ್ನುತ್ತಾರೆ ಮಾತ್ರವಲ್ಲ, ಆರ್ಟಿಕಲ್ 370 ರದ್ದು ಸೇರಿದಂತೆ ನರೇಂದ್ರ ಮೋದಿ ಸರಕಾರ ಕೈಗೊಂಡ ಪರಿವರ್ತನಶೀಲ ಯೋಜನೆಗಳಿಂದಾಗಿ ಕಳೆದ ಹಲವಾರು ತಿಂಗಳಲ್ಲಿ ಜಮ್ಮು ಮತ್ತು ಕಾಶ್ಮೀರದ ಪ್ರವಾಸೀ ತಾಣಗಳು ಮತ್ತು ವಿಮಾನ ನಿಲ್ದಾಣಗಳಲ್ಲಿ ಪ್ರವಾಸಿಗ ಸಂಖ್ಯೆ ದಾಖಲೆ ಮಟ್ಟದಲ್ಲಿ ಇದೆ ಎಂಬ ವಿವರವನ್ನೂ ನೀಡುತ್ತಾರೆ. ಅವರ ಟ್ವೀಟ್ ಪ್ರಕಾರ 79 ಲಕ್ಷಕ್ಕೂ ಹೆಚ್ಚು ಪ್ರವಾಸಿಗರು ಕಣಿವೆ ರಾಜ್ಯಕ್ಕೆ ತೆರಳಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಅಲ್ಲಿನ ಪ್ರವಾಸೋದ್ಯಮ ಅಭಿವೃದ್ಧಿಗೆ ಬಿಡುಗಡೆಯಾದ ಹಣದಲ್ಲೂ ಶೇ. 184ರಷ್ಟು ಹೆಚ್ಚಳವಾಗಿದೆ. ಶ್ರೀನಗರ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಏಪ್ರಿಲ್ ಒಂದೇ ತಿಂಗಳಲ್ಲಿ 102 ವಿಮಾನ ಸಂಚಾರ ಆಗಿದೆ, 15 ಸಾವಿರಕ್ಕೂ ಹೆಚ್ಚು ವಿಮಾನ ಪ್ರಯಾಣಿಕರು ಬಂದು ಹೋಗಿದ್ದಾರೆ. ಪ್ರತಿಕೂಲ ಹವಾಮಾನ ಇಲ್ಲದಿದ್ದರೆ ಅಮರನಾಥ ಮಂದಿರಕ್ಕೆ ಭೇಟಿ ನೀಡುವ ಯಾತ್ರಾರ್ಥಿಗಳ ಸಂಖ್ಯೆ ಈ ಬಾರಿ ದಾಖಲೆ ಮಟ್ಟಕ್ಕೆ ಏರುತ್ತಿತ್ತು ಎಂಬುದು ಅಧಿಕಾರಿಗಳ ಅನಿಸಿಕೆ. ಕೇವಲ ಆರು ತಿಂಗಳ ಅವಧಿಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ 79 ಲಕ್ಷ ಪ್ರವಾಸಿಗರು ಭೇಟಿ ನೀಡಿರುವುದು ಸಣ್ಣ ವಿಷಯವೇನಲ್ಲ. ಕಣಿವೆ ರಾಜ್ಯ ವಿಶೇಷ ಸ್ಥಾನಮಾನ ಕಳೆದುಕೊಂಡ ಬಳಿಕ ಬೆಳವಣಿಗೆಯಲ್ಲಿ ಮುಂದಡಿ ಇಡುತ್ತಿರುವುದು, ಎಲ್ಲರೊಳಗೊಂದಾಗುತ್ತಿರುವುದು ಸ್ವಾಗತಾರ್ಹ.

ಸೊಂಪಾದಕೀಯ

ಕಾಂಗ್ರೆಸ್ ಗಿಡವಾಗಿಯೇ ಬಗ್ಗಿಲ್ಲ ಇನ್ನೂ!

ದಾವಣಗೆರೆಯಲ್ಲಿ ಸಿದ್ದರಾಮೋತ್ಸವ ನಡೆದ ಮೇಲೆ ಬಿಜೆಪಿ ಪಾಳಯದಲ್ಲಿ ಮುಂದಿನ ಚುನಾವಣೆಯಲ್ಲಿ ಗೆಲ್ಲುವ ಬಗ್ಗೆ ಅನುಮಾನಗಳು ಶುರುವಾದಂತಿವೆ. ಹಾಗಾಗಿ, ಬಿಜೆಪಿ ನಾಯಕರು ರಾಜ್ಯದಲ್ಲಿ ಒಬ್ಬೊಬ್ಬರಾಗಿ ಬಿಜೆಪಿ ಬಲ ಕುಂದಿಲ್ಲ ಎಂದು ತೋರಿಸಿಕೊಳ್ಳಲು ಹೊರಟಿದ್ದಾರೆ. ಅಲ್ಲದೆ, ಸಿದ್ದರಾಮೋತ್ಸವದಿಂದ ನಮಗೇನೂ ನಷ್ಟ ಆಗಲ್ಲ ಅಂತ ಆತ್ಮವಿಶ್ವಾಸ ವ್ಯಕ್ತಪಡಿಸ್ತಾ ಇದ್ದಾರೆ. ಸಿದ್ದರಾಮಯ್ಯ ಅವರ ದಾವಣಗೆರೆ ಉತ್ಸವದಿಂದ ಕಾಂಗ್ರೆಸ್ ಪಕ್ಷಕ್ಕೆ ಎಷ್ಟು ಲಾಭ ಆಗುತ್ತೋ ಬಿಡುತ್ತೋ ಆದ್ರೆ ಇಲ್ಲಿ ಗಮನಿಸಬೇಕಾದ ಅಂಶ ಅಂದ್ರೆ, ಬಿಜೆಪಿ ನಾಯಕರು ಮಾತಾಡ್ತಾ ಇರೋ ರೀತಿ. ಕಾಂಗ್ರೆಸ್ ಪಕ್ಷ ಏನೇ ಉತ್ಸವ ಮಾಡಿದ್ರೂ, ಅವರಲ್ಲಿ ಒಳಜಗಳ, ಗುಂಪುಗಾರಿಕೆ ಇದೆ. ಹಾಗಾಗಿ ಮುಂದಿನ ಚುನಾವಣೆಯಲ್ಲಿ ನಾವೇ ಗೆಲ್ತೀವಿ ಅಂತ ಅವರು ಮಾತಾಡ್ತಾ ಇರೋದು ನೋಡಿ ಜನ ಸಾಮಾನ್ಯರಂತೂ ಬೇಸರದಲ್ಲಿದ್ದಾರೆ. ಯಾಕಂದ್ರೆ, ಬಿಜೆಪಿ ಅಪ್ಪಿ, ತಪ್ಪಿ, ನಾವು ಅಭಿವೃದ್ಧಿ ಕೆಲಸ ಮಾಡಿದ್ದೀವಿ, ಹಂಗಾಗಿ, ಜನ ನಮಗೇ ಓಟು ಹಾಕ್ತಾರೆ ಅನ್ನೋ ಮಾತು ಆಡ್ತಿಲ್ಲ. ಕೇವಲ ಇನ್ನೊಂದು ಪಕ್ಷದ ಗುಂಪುಗಾರಿಕೆಯನ್ನು ನಂಬಿಕೊಂಡು ನಾವು ಗೆಲ್ತೀವಿ ಅನ್ನೋ ಮಾತು ಸರಕಾರ ನಡೆಸ್ತಾ ಇರೋ ಪಕ್ಷದವರ ಬಾಯಲ್ಲಿ ಬರೋದು ಎಷ್ಟು ಸರಿ, ಜನರಿಗೆ ಕೊಟ್ಟ ಆಶ್ವಾಸನೆಗಳನ್ನು ಈಡೇರಿಸಿದ್ದೇವೆ, ಜನಸೇವೆ ಮಾಡಿದ್ದೇವೆ, ಅದಕ್ಕೇ ಗೆಲ್ತೀವಿ ಅನ್ನೋ ಪಕ್ಷ ಯಾವಾಗ ಅಧಿಕಾರಕ್ಕೆ ಬರುತ್ತೋ ಅಂತ ಜನ ಸಾಮಾನ್ಯರು ಎದುರು ನೋಡುತ್ತಿದ್ದಾರೆ. ಇದು ನಮ್ಮ ದುರ್ಗತಿ. ಮೊದಲು, ಕಾಂಗ್ರೆಸ್, ಜೆಡಿಎಸ್‌ನ ಕುಮಾರಸ್ವಾಮಿ ಸರಕಾರ ಬಂತು. ಆ ಅವಧಿಯಲ್ಲಿ, ಅವರವರು ಜಗಳ ಆಡಿಕೊಂಡಿದ್ದೇ ಬಂತು. ನಂತರ ಆಪರೇಷನ್ ಕಮಲದಿಂದ ಬಿಜೆಪಿ ಸರಕಾರ ಬಂತು. ಯಡಿಯೂರಪ್ಪ ಬಂದು ಹೋಗಿ, ಡಾಕ್ಟರ್ ಚೇಂಜ್ ಆಗಿ ಬೊಮ್ಮಾಯಿ ಬಂದ್ರು. ಆದ್ರೆ, ಬರೀ ಧರ್ಮ, ಹಿಜಾಬು, ಹಿಂದೂ ಮುಸ್ಲಿಂಗಳ, ಕೊಲೆ, ಅದಕ್ಕೆ ದುಡ್ಡಿಲ್ಲ, ಇದಕ್ಕೆ ದುಡ್ಡಿಲ್ಲ, 40% ಕಮಿಷನ್ ಇವೇ ಮಾತು. ಕಾಂಗ್ರೆಸ್ ಪಕ್ಷ ಏನೂ ಕಮ್ಮಿ ಇಲ್ಲ. ಬರೀ ಕಾಂಗ್ರೆಸ್ ಅನ್ನೋ ಹೆಸರಿನ ಮೇಲೇ 'ಮಗಾ, ಇಲ್ಲಿ ಯಾರೂ, ಯಾರನ್ನೂ ಬೆಳೆಸೋಲ್ಲ, ನಮಗೆ ನಾವೇ ಬೆಳೀಬೇಕು' ಅನ್ನೋ ಕಾಂಗ್ರೆಸ್ ಗಿಡದಂತೆ ಬೆಳೀತು. ಆದ್ರೆ, ತನ್ನ ಬುದ್ಧಿ ಮಾತ್ರ ಬಿಡಲಿಲ್ಲ, ಕಾಂಗ್ರೆಸ್ ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೇ ಅಂತ ಜನ ಕೂಡಾ ಸುಮ್ಮನೆ ಆದ್ರು. ಈಗ ಮತ್ತೆ ಕಾಂಗ್ರೆಸ್ ಗಿಡ ಚಿಗುರೊಡೆದಿದೆ. ದಾವಣಗೆರೆಯಲ್ಲಿ ಸಿದ್ರಾಮಯ್ಯ ನಮ್ಮತ್ರನೂ ಕಾಂಗ್ರೆಸ್ ಕಡ್ಲೆಕಾಯಿಬೀಜ ಇದೆ ಅಂತ ಗುಟುರು ಹಾಕಿದ್ದಾರೆ. ಮುಂದಿನ ಚುನಾವಣೆಯಲ್ಲಿ ಫಸಲು ಯಾವ ರೀತಿ ಬರುತ್ತೋ ನೋಡಬೇಕು.

ಸಂಪಾದಕರ ಸದ್ಯಶೋಧನೆ

'ಕುಲ ಗೌರವ' ಅಮರ

ತಂದೆ ಮತ್ತು ಮಗ ಭಾರತ ಕ್ರಿಕೆಟ್ ತಂಡದಲ್ಲಿ ಸ್ಥಾನ ಪಡೆದಿದ್ದಿದೆ. ಅಣ್ಣ-ತಮ್ಮ ಸಹ ಸ್ಥಾನ ಗಿಟ್ಟಿಸಿಕೊಂಡ ನಿದರ್ಶನಗಳಿವೆ. ಆದರೆ ತಂದೆ ಹಾಗೂ ಅವರ ಮೂವರು ಮಕ್ಕಳು ಮತ್ತು ಒಬ್ಬ ಮೊಮ್ಮಗ ಸಹ ಪ್ರಥಮ ದರ್ಜೆ ಕ್ರಿಕೆಟ್ ಪಂದ್ಯವಾಡಿದ ನಿದರ್ಶನ ಅಪರೂಪ. ಇದು ಅಮರನಾಥ ಕುಟುಂಬಕ್ಕೆ ಸಲ್ಲಬೇಕು. ಲಾಲಾ ಅಮರನಾಥ ಭಾರತ ಕ್ರಿಕೆಟ್ ಕಂಡ ಒಬ್ಬ ಅಪರೂಪದ ಆಟಗಾರ. ಅವರು ಭಾರತ ತಂಡದ ನಾಯಕ ಕೂಡ ಆಗಿದ್ದರು. ಲಾಲಾ ಅಮರನಾಥ ಅವರ ಮಕ್ಕಳಾದ ಸುರಿಂದರ್, ಮೊಹಿಂದರ್ ಮತ್ತು ರಾಜಿಂದರ್ ಸಹ ಭಾರತ ಕ್ರಿಕೆಟ್ ತಂಡದಲ್ಲಿ ಸ್ಥಾನ ಪಡೆದಿದ್ದರು. ಹಾಗೆ ಅವರ ಮೊಮ್ಮಗ ದಿಗ್ವಿಜಯ ಕೂಡ ಪ್ರಥಮ ದರ್ಜೆ ಕ್ರಿಕೆಟ್ ಆಟಗಾರ. 1947-1948 ರಲ್ಲಿ ಭಾರತ ತಂಡ ಆಸ್ಟ್ರೇಲಿಯಾ ಪ್ರವಾಸ ಮಾಡಿದಾಗ, ಲಾಲಾ ಭಾರತ ತಂಡವನ್ನು ಮುನ್ನಡೆಸಿದ್ದರು. 1952 ರಲ್ಲಿ ಭಾರತ ಪ್ರಥಮ ಬಾರಿಗೆ ಪಾಕಿಸ್ತಾನದ ವಿರುದ್ಧ ಗೆಲುವು ಸಾಧಿಸಿದಾಗ, ಅವರೇ ನಾಯಕರಾಗಿದ್ದರು. ಆ ಪ್ರವಾಸದಲ್ಲಿ ಭಾರತ, ಪಾಕಿಸ್ತಾನ ವಿರುದ್ಧ 2-1 ಸರಣಿ ಗೆಲುವು ಸಾಧಿಸಿತ್ತು. ಟೆಸ್ಟ್ ಕ್ರಿಕೆಟ್ ಆಡಿದ ಪ್ರಪ್ರಥಮ ಪಂದ್ಯದಲ್ಲೇ ಶತಕ ಬಾರಿಸಿದ ಮೊದಲ ಭಾರತೀಯ ಬ್ಯಾಟ್ಸಮನ್ ಎಂಬ ಅಗ್ಗಳಿಕೆಗೆ ಪಾತ್ರರಾದ ಲಾಲಾ ಅಮರನಾಥ, ನಂತರ ಶತಕ ಹೊಡೆಯದೇ ಇದ್ದಿದ್ದು ವಿಪರ್ಯಾಸ. ಅವರು ಆಡಿದ್ದೇ 24 ಟೆಸ್ಟ್ ಪಂದ್ಯ. ಹೊಡೆದಿದ್ದು ಒಂದು ಶತಕ ಮತ್ತು ನಾಲ್ಕು ಅರ್ಧ ಶತಕ. ಆದರೂ ಇಂದಿಗೂ ಭಾರತ ಕ್ರಿಕೆಟ್‌ನ ದಿಗ್ಗಜಗಳಲ್ಲಿ ಲಾಲಾ ಅಮರನಾಥ ಸಹ ಒಬ್ಬರು ಎಂದು ಪರಿಗಣಿತರಾಗಿದ್ದಾರೆ. ತಂದೆಯ ಹಾಗೆ ಆಡಿದ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲೇ ಶತಕ ಬಾರಿಸಿದವರೆಂದರೆ ಸುರಿಂದರ್ ಅಮರನಾಥ. ಇಂದಿಗೂ ಮೊದಲ ಟೆಸ್ಟಿನಲ್ಲಿ ಶತಕ ಬಾರಿಸಿದ ಅಪ್ಪ-ಮಗ ಅಂದ್ರೆ ಲಾಲಾ ಅಮರನಾಥ ಮತ್ತು ಸುರಿಂದರ್ ಅಮರನಾಥ. ಈ ದಾಖಲೆ ಮುರಿಯುವುದು ಅಷ್ಟು ಸುಲಭವಲ್ಲ. ಮೊದಲನೆಯದಾಗಿ, ಅಪ್ಪ ಮೊದಲ ಟೆಸ್ಟಿನಲ್ಲಿ ಶತಕ ಬಾರಿಸಬೇಕು, ಎರಡನೆಯದಾಗಿ, ಅವನ ಮಗ ಕ್ರಿಕೆಟ್ ತಂಡದಲ್ಲಿ ಸ್ಥಾನ ಗಿಟ್ಟಿಸಬೇಕು ಮತ್ತು ಮೂರನೆಯದಾಗಿ, ಆತನ ಮಗನೂ ಮೊದಲ ಟೆಸ್ಟಿನಲ್ಲೇ ಶತಕ ಹೊಡೆಯಬೇಕು. ಇಷ್ಟು ವರ್ಷಗಳಾದರೂ ಈ ದಾಖಲೆ ಮಾತ್ರ 'ಅಮರನಾಥ' ಅವರ ಹೆಸರಿನಲ್ಲೇ ಇರುವುದು ಗಮನಾರ್ಹ. ತಂದೆಯಂತೆ, ಸುರಿಂದರ್ ಅಮರನಾಥ, ನಂತರ ಮತ್ತೊಂದು ಶತಕ ಬಾರಿಸದಿರುವುದು ವಿಚಿತ್ರವಾದರೂ ಸತ್ಯ. ಸುರಿಂದರ್ ಆಡಿದ್ದೇ ಹತ್ತು ಟೆಸ್ಟ್‌ಗಳು. ಆದರೆ ಲಾಲಾ ಅವರ ಮತ್ತೊಬ್ಬ ಮಗ ಮೊಹಿಂದರ್, ಪ್ರಥಮ ಟೆಸ್ಟಿನಲ್ಲಿ ಶತಕ ಹೊಡೆಯಲಿಲ್ಲ, ಆದರೆ ತಂದೆ ಮತ್ತು ಅಣ್ಣನಿಗಿಂತ ಹೆಚ್ಚು ಟೆಸ್ಟ್ ಪಂದ್ಯ (69) ಆಡಿದರು ಮತ್ತು ಅವರಿಬ್ಬರಿಗಿಂತ ಹೆಚ್ಚು ಶತಕ (11) ಹೊಡೆದರು. ಉತ್ತಮ ಆಲ್ರೌಂಡರ್ ಕೂಡ ಆಗಿದ್ದ ಮೊಹಿಂದರ್, ಟೆಸ್ಟ್ ಪಂದ್ಯಗಳಲ್ಲಿ 32 ವಿಕೆಟ್ ಕೂಡ ಪಡೆದಿದ್ದಾರೆ. 'ಮೊಹಿಂದರ್ ಅಮರನಾಥ ಜಗತ್ತಿನ ಅತ್ಯಂತ ಉತ್ತಮ ಬ್ಯಾಟ್ಸಮನ್‌ಗಳಲ್ಲಿ ಒಬ್ಬರು' ಎಂದು ಪಾಕಿಸ್ತಾನದ ಇಮ್ರಾನ್ ಖಾನ್ 1982 ರಲ್ಲಿ ಮುಕ್ತ ಕಂಠದಲ್ಲಿ ಪ್ರಶಂಸಿಸಿದ್ದರು. ಈ ಮಾತನ್ನು ಸಮರ್ಥಿಸುವಂತೆ, 1983 ರ ಐತಿಹಾಸಿಕ ವಿಶ್ವಕಪ್ ಪಂದ್ಯದ ಸೆಮಿ-ಫೈನಲ್ ಮತ್ತು ಫೈನಲ್ ಪಂದ್ಯಗಳಲ್ಲಿ ಮೊಹಿಂದರ್ ಅಮರನಾಥ 'ಪಂದ್ಯ ಪುರುಷ' ಎನಿಸಿಕೊಂಡಿದ್ದರು. ಆ ವಿಶ್ವಕಪ್ ಸರಣಿಯಲ್ಲಿ ಭಾರತ ವೀರೋಚಿತ ಗೆಲುವು ಸಾಧಿಸಿದ್ದು ಇಂದಿಗೂ ಒಂದು ಸವಿನೆನಪು. ಇತ್ತೀಚೆಗೆ ಈ ಸರಣಿಯನ್ನಾಧರಿಸಿದ ಸಿನಿಮಾ '83' ಕೂಡ ಬಿಡುಗಡೆಯಾಗಿದ್ದು ಗೊತ್ತಿದೆ. ಕೈಯಲ್ಲಿ ಚೆಂಡನ್ನು ಮುಟ್ಟುವ ಮೂಲಕ (handling the ball) ಔಟಾದ ಮತ್ತು ಫೀಲ್ಡಿಂಗಿಗೆ ಅಡ್ಡಿಪಡಿಸಿದ ಪ್ರಪ್ರಥಮ ಆಟಗಾರ ಎಂದು ಯಾರಾದರೂ ಕರೆಯಿಸಿಕೊಂಡಿದ್ದರೆ ಅದು ಮೊಹಿಂದರ್ ಅಮರನಾಥ. ಬ್ಯಾಟ್ ಮಾಡುವಾಗ ಯಾವತ್ತೂ ಕೆಂಪು ಕರ್ಚೀಫನ್ನು ಪ್ಯಾಂಟಿನ ಜೇಬಿನಲ್ಲಿ ಎಲ್ಲರಿಗೂ ಕಾಣಿಸುವಂತೆ ಇರಿಸಿಕೊಳ್ಳುತ್ತಿದ್ದರು.

ಯಾರದ್ದೋ ತೆರಿಗೆ ದುಡ್ಡು ಯಲ್ಲಮ್ಮನ ಜಾತ್ರೆ!

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ

camohanbn@gmail.com

ಒಂದು ದೇಶದ ಆರ್ಥಿಕತೆಯನ್ನು ಒಂದು ಕುಟುಂಬದ ಆರ್ಥಿಕತೆಯೊಂದಿಗೆ ಹೋಲಿಸಬಹುದು. ಕುಟುಂಬದ ಆದಾಯದ ಮೂಲ ಹಲವು. ದುಡಿಯುವವರು ಒಬ್ಬರಿದ್ದರೆ, ದುಡಿಮೆಯಿಂದ ಜೀವನ ನಡೆಸುವವರು ಹಲವರಿರುತ್ತಾರೆ. ದೇಶದ ಆರ್ಥಿಕತೆಯೂ ಅಷ್ಟೇ ದುಡಿಯುವವರ ದುಡಿಮೆಯಿಂದ ಬರುವ ತೆರಿಗೆಯಿಂದ ಹಲವು ಜನರ ಜೀವನವನ್ನು ನೋಡಿಕೊಳ್ಳಬೇಕಾಗುತ್ತದೆ. ಹೇಗೆ ಕುಟುಂಬದಲ್ಲಿ ಸಂಬಳ ಕಡಿಮೆಯಾದಾಗ ಸಾಲ ಮಾಡಬೇಕಾದಂತಹ ಪರಿಸ್ಥಿತಿ ಎದುರಾಗುತ್ತದೆಯೋ, ಹಾಗೆ, ದೇಶದ ಆರ್ಥಿಕತೆಯ ವಿಚಾರದಲ್ಲಿಯೂ ಆದಾಯ ಕಡಿಮೆಯಾದಾಗ ಸಾಲ ಮಾಡಬೇಕಾದ ಪರಿಸ್ಥಿತಿ ಎದುರಾಗುತ್ತದೆ. ಕುಟುಂಬದಲ್ಲಿ ದುಂದು ವೆಚ್ಚಗಳಿಗೆ ಕಡಿವಾಣ ಹಾಕಿದಂತೆ ದೇಶದ ಆರ್ಥಿಕತೆಯನ್ನು ಮುನ್ನಡೆಸುವಾಗ ದುಂದುವೆಚ್ಚಗಳಿಗೆ ಕಡಿವಾಣ ಹಾಕ ಬೇಕಾಗುತ್ತದೆ. ಕುಟುಂಬವೊಂದರಲ್ಲಿ ವಯಸ್ಸಿಗೆ ಬಂದ ಯುವಕನಿಗೆ ಹೊರಗೆ ಕೆಲಸ ಮಾಡಲು ಹೇಳಿ ಮನೆಯ ಆರ್ಥಿಕತೆಗೆ ಸಹಾಯ ಮಾಡಲು ಹೇಳಬೇಕು. ಅದರ ಬದಲು ಕುಟುಂಬದ ಹಿರಿಯ ಸದಸ್ಯ ತನ್ನ ಆದಾಯದಿಂದ ಯುವಕನ ಜೀವನ ನೋಡಿಕೊಳ್ಳುತ್ತಿದ್ದರೆ ಆ ಯುವಕ ಜೀವನ ಪೂರ್ತಿ ಆರಾಮಾಗಿದ್ದುಬಿಡುತ್ತಾನೆ. ಸಮಾಜದ ಕೆಲವೊಂದು ವರ್ಗಕ್ಕೆ ಬೇಕಿರುವ ಸಾಮಾಜಿಕ ಭದ್ರತೆಯನ್ನು ನೀಡಬೇಕು ನಿಜ, ಆದರೆ ಎಷ್ಟು ನೀಡಬೇಕು? ಯಾವಾಗ ನೀಡಬೇಕು? ಯಾವಾಗ ನಿಲ್ಲಿಸಬೇಕೆಂಬ ಸ್ಪಷ್ಟತೆಯಿರಬೇಕು. ನಮ್ಮ ಸಂವಿಧಾನ ರಾಜ್ಯ ಹಾಗೂ ಕೇಂದ್ರ ಸರಕಾರಕ್ಕೆ ಪ್ರತ್ಯೇಕ ಹಕ್ಕುಗಳನ್ನು ನೀಡಿದೆ. ಕೆಲವು ರಾಜ್ಯಗಳು ತಮ್ಮ ಮತಬ್ಯಾಂಕನ್ನು ಹೆಚ್ಚಿಸಿಕೊಳ್ಳಲು ಮತದಾರರಿಗೆ ಸಾಮಾಜಿಕ ಭದ್ರತೆಯ ಹೆಸರಿನಲ್ಲಿ ಹಲವು ಉಚಿತ ಯೋಜನೆಗಳ ಭರವಸೆಯನ್ನು ನೀಡುತ್ತವೆ. ಭರವಸೆ ಈಡೇರಿಸಲು ಬೇಕಿರುವ ತೆರಿಗೆ ಹಣ ಸಾಕಾಗದೆ ಇದ್ದಾಗ ಸಾಲವನ್ನಾದರೂ ಮಾಡಿ ಭರವಸೆ ಈಡೇರಿಸುತ್ತವೆ.

ಸರ್ವೋಚ್ಚ ನ್ಯಾಯಾಲಯ ಕಳೆದ ಕೆಲವು ತಿಂಗಳುಗಳಿಂದ, ಉಚಿತ ಯೋಜನೆಗಳ ರಾಜಕಾರಣದ ವಿಷಯದಲ್ಲಿ ಚುನಾವಣಾ ಆಯೋಗಕ್ಕೆ ಚಾಟಿ ಬೀಸುತ್ತಿದೆ. ರಾಜಕೀಯ ಪಕ್ಷಗಳು ಸಾಮಾಜಿಕ ಭದ್ರತೆಯ ವಿಷಯದಲ್ಲಿ ಮತದಾರರಿಗೆ ಹತ್ತಾರು ಆಮಿಷಗಳನ್ನು ಒಡ್ಡುವ ಮೂಲಕ ರಾಜ್ಯದ ಆರ್ಥಿಕತೆಯನ್ನು ಅಧಃಪತನಕ್ಕೆ ಕೊಂಡೊಯ್ಯುತ್ತಿರುವ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ನ್ಯಾಯಾಲಯ ಹೇಳಿದೆ. ಭಾರತೀಯ ರಿಸರ್ವ ಬ್ಯಾಂಕ್ -ಕೇರಳ, ಪಶ್ಚಿಮ ಬಂಗಾಳ, ಪಂಜಾಬ್, ರಾಜಸ್ಥಾನ, ಆಂಧ್ರ ಪ್ರದೇಶ ಹಾಗೂ ಬಿಹಾರ ರಾಜ್ಯಗಳ ಆರ್ಥಿಕ ಪರಿಸ್ಥಿತಿ ಅತ್ಯಂತ ಒತ್ತಡದಲ್ಲಿದೆಯೆಂದು ವರದಿ ಮಾಡಿದೆ. ಪಂಜಾಬ್‌ನ ಆರ್ಥಿಕತೆ ಅತ್ಯಂತ ಹದಗೆಟ್ಟಿದ್ದು 2026-27 ರ ಹೊತ್ತಿಗೆ ತನ್ನ ರಾಜ್ಯದ 'ಜಿಡಿಪಿ' ಯ ಶೇ. 46 ಸಾಲಕ್ಕೆ ತಳ್ಳಲ್ಪಡುತ್ತದೆಯೆಂದು ಅಂದಾಜಿಸಲಾಗಿದೆ. ಪಂಜಾಬ್ ರಾಜ್ಯವನ್ನಾಳಿದ ಕಾಂಗ್ರೆಸ್ ಸಾಲದ ಶೂಲದಲ್ಲಿ ರಾಜ್ಯವನ್ನು ಸಿಲುಕಿಸಿತ್ತು. ಈಗ ಅವರನ್ನು ಮೀರಿಸುವಂತೆ 'ಆಮ್ ಆದ್ಮಿ ಪಕ್ಷ' ಚುನಾವಣೆಯನ್ನು ಗೆಲ್ಲುವ ಸಲುವಾಗಿ ಹತ್ತಾರು ಉಚಿತ ಯೋಜನೆಗಳ ಭರವಸೆ ನೀಡುವ ಮೂಲಕ ರಾಜ್ಯವನ್ನೇ ದಿವಾಳಿಯನ್ನಾಗಿಸುವತ್ತ ಹೊರಟಿದೆ. ದೆಹಲಿಯಲ್ಲಿ ಈ ಪಕ್ಷಕ್ಕೆ ಅಷ್ಟೊಂದು ಆರ್ಥಿಕ ಹೊರೆಯಿರುವುದಿಲ್ಲ, ದೆಹಲಿಯನ್ನು ನಿರ್ವಹಿಸುವುದು ಹಾಗೂ ಬೆಂಗಳೂರನ್ನು ನಿರ್ವಹಿಸುವುದು ಎರಡೂ ಒಂದೇ. ಪಂಜಾಬ್ ಹಾಗಲ್ಲ ಅಲ್ಲಿ ರೈತರಿದ್ದಾರೆ, ನೀರಿನ ಸಮಸ್ಯೆಯಿದೆ, ಹಳ್ಳಿಗಳಿವೆ. ಇತ್ತೀಚೆಗೆ ದೆಹಲಿ ಸರಕಾರದ ಆರ್ಥಿಕತೆಯ ವರದಿ ಹೊರಬಂದಾಗ, ಅಲ್ಲಿನ ಸರಕಾರದಲ್ಲಿ 'ವಿತ್ತೀಯ ಹೆಚ್ಚುವರಿ ಹಣ'ವಿದೆಯೆಂದು ಹೇಳಲಾಗಿತ್ತು. ಹೆಚ್ಚುವರಿ ಹಣ ಉಳಿತಾಯದಿಂದ ಬಂದಿಲ್ಲ, ಬದಲಾಗಿ ಸಾಲದಿಂದ ಬಂದಿದೆ. ದೆಹಲಿಯ ಪೊಲೀಸರು ಕೇಂದ್ರ ಗೃಹ ಇಲಾಖೆಯಲ್ಲಿರುವುದರಿಂದ ಸಂಪೂರ್ಣ ಖರ್ಚನ್ನು ಕೇಂದ್ರ ಗೃಹ ಇಲಾಖೆ ಭರಿಸುತ್ತದೆ. ದೆಹಲಿ ಸರಕಾರದ ಪಿಂಚಣಿ ಹಣದ ಜವಾಬ್ದಾರಿ ಕೇಂದ್ರ ಸರಕಾರ ವಹಿಸಿಕೊಂಡಿದೆ. ದೆಹಲಿಯ ಹಲವು ಖರ್ಚುಗಳು ಕೇಂದ್ರದಲ್ಲಿರುವುದರಿಂದ ಉಚಿತ ಭರವಸೆ ನೀಡಿಯೂ ಸಾಲ ಮಾಡಿದೆ.

ಸಾಲ ಮಾಡುವುದು ತಪ್ಪಲ್ಲ, ಮಾಡಿದ ಸಾಲದ ಹಣ ಎಲ್ಲಿ ವಿನಿಯೋಗವಾಯಿತೆಂಬುದು ಬಹಳ ಮುಖ್ಯ. ಸಾಲ ಮಾಡಿ ಆಸ್ತಿಯ ಮೇಲೆ ಹೂಡಿಕೆ ಮಾಡಿದರೆ ಆದಾಯದ ಮೂಲವಾಗುತ್ತದೆ. ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರಗಳು ಸಾಲ ಮಾಡಿ ಆದಾಯದ ಮೂಲಗಳನ್ನು ಸೃಷ್ಟಿ ಮಾಡಬೇಕು. ನರೇಂದ್ರ ಮೋದಿಯವರು ಅಧಿಕಾರಕ್ಕೆ ಬಂದ ಮೇಲೆ ಕೇಂದ್ರ ಸರಕಾರದ ಸಾಲ ಹೆಚ್ಚಾಗಿದೆಯೆಂದು ಬೊಬ್ಬೆ ಹೊಡೆದುಕೊಳ್ಳುವ ಪ್ರತಿಪಕ್ಷಗಳು, ಆ ಸಾಲದಿಂದಲೇ ಕಟ್ಟಿರುವ ವಿಶ್ವ ದರ್ಜೆಯ ರಾಷ್ಟ್ರೀಯ ಹೆದ್ದಾರಿಗಳ ಮೇಲೆ ಓಡಾಡುತ್ತಿರುತ್ತವೆ. ಸಾಲ ಮಾಡಿ ಮನೆಯನ್ನು ಕಟ್ಟಿ ಅದರಿಂದ ಬರುವ ಬಾಡಿಗೆಯಿಂದ ಸಾಲವನ್ನು ತೀರಿಸಿ ಉಳಿದ ಆದಾಯವನ್ನು ಮನೆ ಖರ್ಚಿಗೆ ಬಳಸಿಕೊಳ್ಳುವುದಿಲ್ಲವೇ?

ಆಂಧ್ರಪ್ರದೇಶದ ಜಗನ್ ಮೋಹನ್ ರೆಡ್ಡಿ ನೇತೃತ್ವದ ಸರಕಾರ ಚುನಾವಣಾ ಭರವಸೆಗಳನ್ನು ಈಡೇರಿಸುವ ಸಲುವಾಗಿ ಸಾಲದ ಶೂಲಕ್ಕೆ ಸಿಲುಕಿದೆ. ರಾಜ್ಯದ ಸಾಲದ ಮೊತ್ತ 3,89,000 ಕೋಟಿಗೆ ತಲುಪಿದೆ. ತನ್ನನ್ನು ತಾನು ಚುನಾವಣಾ ಚಾಣಕ್ಯನೆಂದು ಹೇಳಿಕೊಂಡು ಕೋಟ್ಯಂತರ ರೂಪಾಯಿ ಹಣ ವಸೂಲಿ ಮಾಡುವ ಪ್ರಶಾಂತ್ ಕಿಶೋರ್ ಆಂಧ್ರಪ್ರದೇಶದ ಚುನಾವಣಾ ಪ್ರಚಾರಕ್ಕೆ ಬಳಸಿಕೊಂಡಿದ್ದು ಉಚಿತ ಭರವಸೆಗಳ ಪ್ರಣಾಳಿಕೆಯನ್ನಷ್ಟೇ. ನೇರವಾಗಿ ಸರಕಾರದ ಹಣದಿಂದ ಮತವನ್ನು ಖರೀದಿಸುವ ತಂತ್ರಗಾರಿಕೆಯನ್ನು ಈತ ಆಂಧ್ರದಲ್ಲಿ ಬಳಸಿದ್ದ. ಉಚಿತ ಭರವಸೆಗಳ ಮೂಲಕ ಚುನಾವಣೆ ಗೆಲ್ಲುವವನನ್ನು ಹೇಗೆ ಚುನಾವಣಾ ಚಾಣಕ್ಯನೆನ್ನುತ್ತಾರೋ ದೇವರೇ ಬಲ್ಲ! ಸಮಾಜದ ಪ್ರತಿಯೊಂದು ವರ್ಗಕ್ಕೂ ಜಗನ್ ನೇತೃತ್ವದ ಸರಕಾರ ಉಚಿತ ಭರವಸೆಗಳ ಮಹಾಪೂರವನ್ನೇ ನೀಡಿತ್ತು. ಭರವಸೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಸಿಕ್ಕ ಸಿಕ್ಕ ಕಡೆ ಸಾಲ ಮಾಡಿದೆ. ತನ್ನ 'ಭವಿಷ್ಯದ ತೆರಿಗೆ ಹಣ'ವನ್ನು ಅಡವಿಟ್ಟು ಬ್ಯಾಂಕುಗಳ ಬಳಿ ಸಾಲ ಪಡೆದಿದೆ. ಆಂಧ್ರ ಪ್ರದೇಶದ ಈ ನೀತಿಯನ್ನು ಖಂಡಿಸಿದ 'ರಿಸರ್ವ್ ಬ್ಯಾಂಕ್' ಭವಿಷ್ಯದ ತೆರಿಗೆಯ ಮೇಲೆ ಸಾಲ ನೀಡುವುದನ್ನು ನಿಲ್ಲಿಸುವಂತೆ ಹೇಳಿದೆ. ಮತದಾರ ಅರ್ಥ ಮಾಡಿಕೊಳ್ಳಬೇಕಿರುವ ವಿಷಯವೆಂದರೆ ತಾನು ಕಟ್ಟಿದ ತೆರಿಗೆಯ ಹಣವೇ ತನಗಾಗಿ ಉಚಿತ ಯೋಜನೆಯ ರೂಪದಲ್ಲಿ ವಾಪಸ್ ಬರುತ್ತದೆ.

ಉಚಿತ ಯೋಜನೆಗಳ ಮೂಲಕ ಮತ ಸೆಳೆಯುವ ತಂತ್ರಗಾರಿಕೆಯನ್ನು ಪ್ರಾರಂಭಿಸಿದ ಕೀರ್ತಿ ತಮಿಳುನಾಡಿಗೆ ಸಲ್ಲಬೇಕು. ಅಮ್ಮ ಕ್ಯಾಂಟೀನ್, ಅಮ್ಮ ಲ್ಯಾಪ್‌ಟಾಪ್, ಅಮ್ಮ ಅಕ್ಕಿ, ಅಮ್ಮ ಮನೆಗಳು, ಅಮ್ಮ ಆಟೋಗಳು, ಅಮ್ಮ ಮೊಬೈಲ್...ಹೀಗೆ ಹತ್ತು ಹಲವು ಯೋಜನೆಗಳನ್ನು ಜಾರಿಗೆ ತರುವ ಮೂಲಕ ಅಲ್ಲಿನ ಜನರ ಮನಃಸ್ಥಿತಿಯನ್ನೇ ಬದಲಾಯಿಸಿಬಿಟ್ಟರು. ನಿಮಗೆ ನೆನಪಿದ್ದರೆ ಸುಮಾರು ಎರಡು ದಶಕಗಳ ಹಿಂದೆ ಬೆಂಗಳೂರಿನಲ್ಲಿ ಮನೆ ಕಟ್ಟುವ ಕೆಲಸಗಾರರೆಂದರೆ ತಮಿಳುನಾಡಿನವರಾಗಿದ್ದರು. ಯಾವಾಗ ಅಮ್ಮ ಅಲ್ಲಿ ಉಚಿತ ಯೋಜನೆಗಳನ್ನು ನೀಡಲು ಪ್ರಾರಂಭಿಸಿದರೋ ಬೆಂಗಳೂರಿನಲ್ಲಿ ಅವರ ಸಂಖ್ಯೆ ಸಂಪೂರ್ಣ ಇಳಿದು ಹೋಯಿತು. ಅವರ ಮನಃಸ್ಥಿತಿಯೇ ಸಂಪೂರ್ಣ ಬದಲಾಗಿ ಆರಾಮಾಗಿ ತಮ್ಮ ತಮ್ಮ ಊರುಗಳಲ್ಲಿ ಸರಕಾರೀ ಯೋಜನೆಗಳಿಂದಲೇ ಜೀವನ ನಡೆಸುತ್ತಿದ್ದಾರೆ.

ರಾಜ್ಯ ಸರಕಾರಗಳು ಬ್ಯಾಂಕಿನಿಂದ ಪಡೆಯುವ ಸಾಲದ ಹಣವೂ ಸಹ ಮತದಾರನದ್ದೇ. ಮತದಾರ ಬ್ಯಾಂಕಿನಲ್ಲಿಟ್ಟಿರುವ ಠೇವಣಿ ಹಣವನ್ನೇ ಸಾಲದ ರೂಪದಲ್ಲಿ ಸರಕಾರಗಳಿಗೆ ನೀಡಲಾಗುತ್ತದೆ. ಅದೇ ಸಾಲದಿಂದ ಉಚಿತ ಯೋಜನೆಗಳನ್ನು ನೀಡಿ ಬ್ಯಾಂಕಿನಲ್ಲಿರುವ ಮತದಾರನ ಠೇವಣಿ ಅಪಾಯದಲ್ಲಿ ಸಿಲುಕಿರುತ್ತದೆ. ವಿಜಯ್ ಮಲ್ಯ, ನೀರವ್ ಮೋದಿ, ಲಲಿತ್ ಮೋದಿ, ಮೆಹುಲ್ ಚೋಕ್ಸಿಯಂತಹ ಬೃಹತ್ ವ್ಯವಹಾರಸ್ಥರಿಗೆ ನೀಡಿರುವ ಸಾಲದಿಂದ ಠೇವಣಿದಾರರಿಗೆ ಅಪಾಯವಾಗುವುದು ಎಷ್ಟು ಸತ್ಯವೋ, ರಾಜ್ಯ ಸರಕಾರಗಳ ಉಚಿತ ಯೋಜನೆಗಳಿಂದುಂಟಾಗುವ ಅಪಾಯವೂ ಸಹ ಅಷ್ಟೇ ಸತ್ಯ. ಶ್ರೀಲಂಕಾದ ಆರ್ಥಿಕ ಪರಿಸ್ಥಿತಿ ಹದಗೆಡಲು ಮುಖ್ಯ ಕಾರಣವೂ ಅತಿಯಾದಂತಹ ಸಾಲ. ತನ್ನ ಯೋಜನೆಗಳಿಗೆ ಬಂಡವಾಳ ಆಕರ್ಷಿಸುವ ಬದಲು ವಿದೇಶಿ ಸಾಲವನ್ನು ನಂಬಿಕೊಂಡನಂತಹ ಶ್ರೀಲಂಕಾ ಅಧಃಪತನಕ್ಕೆ ಹೋಯಿತು. ಭಾರತದ ಸಂವಿಧಾನದ ರೀತಿಯಲ್ಲಿ ಶ್ರೀಲಂಕಾದಲ್ಲಿ ಎರಡು ಶಕ್ತಿ ಕೇಂದ್ರಗಳಿಲ್ಲ. ರಾಜ್ಯಗಳ ಆರ್ಥಿಕ ಪರಿಸ್ಥಿತಿ ಹದಗೆಟ್ಟರೆ ಕೈಹಿಡಿಯಲು ಕೇಂದ್ರವಿಲ್ಲ. ಭಾರತದಲ್ಲಿ ರಾಜ್ಯ ಹಾಗೂ ಕೇಂದ್ರವೆಂಬ ಎರಡು ಶಕ್ತಿ ಕೇಂದ್ರಗಳಿರುವುದರಿಂದ ಸಾಲದ ಶೂಲದಲ್ಲಿರುವ ರಾಜ್ಯಗಳು ಬಚಾವಾಗಿವೆ.

15ನೆಯ ಹಣಕಾಸು ಆಯೋಗದ ನಿಯಮದಂತೆ ತೆರಿಗೆ ಶೇ.41 ಕೇಂದ್ರಕ್ಕೆ ಹೋಗಿ ಪುನಃ ರಾಜ್ಯಗಳಿಗೆ ಹಂಚಿಕೆಯಾಗುವುದರಿಂದ ಆರ್ಥಿಕ ಶಿಸ್ತಿದೆ. ಕೇಂದ್ರದ ಪಾಲಿನ ತೆರಿಗೆ ರಾಜ್ಯಗಳಿಗೆ ಒಂದು ರೀತಿಯ ಉಳಿತಾಯವಾಗಿರುವುದರಿಂದ ರಾಜ್ಯಗಳ ಕಷ್ಟ ಕಾಲದಲ್ಲಿ ಸಹಾಯ ಮಾಡಲು ಅನುಕೂಲವಾಗುತ್ತದೆ. ಅಪ್ಪಿ ತಪ್ಪಿ ಕೇಂದ್ರದ ತೆರಿಗೆಯಿಲ್ಲದೆ ಕೇವಲ ರಾಜ್ಯಗಳದ್ದೇ ಆಡಳಿತವಿದ್ದಿದ್ದರೆ ಇಷ್ಟು ಹೊತ್ತಿಗೆ ಹಲವು ರಾಜ್ಯಗಳು ದಿವಾಳಿಯಾಗುತ್ತಿದ್ದವು. ಕರ್ನಾಟಕದ ಸಾಲದ ಮೊತ್ತವನ್ನು ಮೊದಲ ಬಾರಿಗೆ ಲಕ್ಷ ಕೋಟಿಗೆ ಏರಿಸಿದ ಕೀರ್ತಿ ಸಿದ್ದರಾಮಯ್ಯರಿಗೆ ಸಲ್ಲಬೇಕು. ಮತಬ್ಯಾಂಕಿಗಾಗಿ ಆರ್ಥಿಕ ಶಿಸ್ತನ್ನು ಕಾಪಾಡದೇ ರಾಜ್ಯದ ಆರ್ಥಿಕತೆಯನ್ನು ಅಧಃಪತನಕ್ಕಿಳಿಸಿದ್ದರು. ಕರೋನ ಸಂದರ್ಭದಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ತೆರಿಗೆಯ ಕೊರತೆಯಿಂದ ಮಾಡಿರುವ ಸಾಲಗಳ ಬಗ್ಗೆ ಮಾತನಾಡುವುದಿಲ್ಲ. ಸಾಲ ಮಾಡಲೇ ಬೇಕಾದಂತಹ ಪರಿಸ್ಥಿತಿ ಎದುರಾದಾಗ ಮಾಡಲೇಬೇಕು. ಕರೋನ ಆರ್ಥಿಕ ಹೊಡೆತದ ಪರಿಣಾಮ ಜಗತ್ತಿನ ದೊಡ್ಡ ದೊಡ್ಡ ದೇಶಗಳೇ ಸಾಲದ ಸುಳಿಯಲ್ಲಿ ಸಿಲುಕಿವೆ.

ಪಶ್ಚಿಮ ಬಂಗಾಳವನ್ನಾಳುತ್ತಿರುವ ಮಮತಾ ಬ್ಯಾನರ್ಜಿ ತನ್ನ ಅಧಿಕಾರಾವಧಿಯಲ್ಲಿ ರಾಜ್ಯದ ಆರ್ಥಿಕತೆಯನ್ನು ಪಾತಾಳಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಅಲ್ಪಸಂಖ್ಯಾತರನ್ನು ಓಲೈಸುವ ಸಲುವಾಗಿ ಇಲ್ಲಸಲ್ಲದ ಉಚಿತ ಯೋಜನೆಗಳನ್ನು ಜಾರಿಗೆ ತಂದಿರುವ ಮಮತಾ ರಾಜ್ಯದಲ್ಲಿ ಬಂಡವಾಳ ಹೂಡಲು ಹೂಡಿಕೆದಾರರು ಹೆದರುವ ಪರಿಸ್ಥಿತಿ ಎದುರಾಗಿದೆ. ಸಾಮಾನ್ಯವಾಗಿ ಪ್ರಾದೇಶಿಕ ಪಕ್ಷಗಳ ಆಳ್ವಿಕೆಯ ರಾಜ್ಯಗಳಲ್ಲಿ ಆರ್ಥಿಕ ಶಿಸ್ತಿಗೆ ಹೊಡೆತ ಬಿದ್ದಿರುತ್ತದೆ. ಒರಿಸ್ಸಾ ರಾಜ್ಯದ ಬಿಜು ಜನತಾದಳದ ನಾಯಕ ನವೀನ್ ಪಾಟ್ನಾಯಿಕ್ ಅವರು ಇದಕ್ಕೆ ತದ್ವಿರುದ್ಧವಾಗಿ, ಆರ್ಥಿಕ ಶಿಸ್ತಿನೊಂದಿಗೆ ರಾಜ್ಯವನ್ನು ಮುನ್ನಡೆಸುತ್ತಿದ್ದಾರೆ. ಜಿಎಸ್‌ಟಿ ತೆರಿಗೆಯ ಬಗೆಗಿನ ಪ್ರತಿಯೊಂದು ನಿರ್ಧಾರವೂ ಸರ್ವ ರಾಜ್ಯಗಳ ಸಭೆಯಲ್ಲಿ ನಿರ್ಧಾರವಾಗುತ್ತದೆ. ತಾವು ಭರವಸೆ ನೀಡಿರುವ ಉಚಿತ ಯೋಜನೆಗಳನ್ನು ಈಡೇರಿಸುವ ಸಲುವಾಗಿ ಆಂಧ್ರ ಪ್ರದೇಶ, ಪಶ್ಚಿಮ ಬಂಗಾಳ, ಪಂಜಾಬ್, ದೆಹಲಿ, ರಾಜಸ್ಥಾನ್, ತಮಿಳುನಾಡು, ಕೇರಳ ರಾಜ್ಯಗಳು ತೆರಿಗೆ ಏರಿಕೆಯ ಬಗ್ಗೆ ತಾವೇ ಪ್ರಸ್ತಾಪಿಸಿ, ತೆರಿಗೆ ಏರಿಕೆಯನ್ನು ಬೆಂಬಲಿಸಿ, ಸಭೆಯಿಂದ ಹೊರಬಂದು ಸುಳ್ಳಿನ ಮೂಲಕ ಮೋದಿಯನ್ನು ದೂರುತ್ತಾರೆ.

ಕಮ್ಯುನಿಸ್ಟರ ಆಡಳಿತದಿಂದ ಕೇರಳ ರಾಜ್ಯದ ಆರ್ಥಿಕ ಪರಿಸ್ಥಿತಿ ಪಾತಾಳಕ್ಕಿಳಿದಿದೆ. ಪಶ್ಚಿಮ ಬಂಗಾಳವನ್ನು ಮೂರು ದಶಕಗಳ ಕಾಲ ಆಳಿದ ಕಮ್ಯುನಿಸ್ಟರು ಬಂಗಾಳದ ಅಭಿವೃದ್ಧಿಯನ್ನು ಪಾತಾಳಕ್ಕೆ ತಳ್ಳಿದ್ದರು. ಕಮ್ಯುನಿಸ್ಟರ ರಾಜ್ಯಗಳಿಗೆ ಬಂಡವಾಳ ಹರಿದುಬರುವುದು ಸುಲಭವಲ್ಲ. ಬಂಡವಾಳಶಾಹಿಗಳಿಲ್ಲದೆ ಸಮಾಜವಾದವನ್ನು ಅನುಷ್ಠಾನಗೊಳಿಸಲು ಸಾಧ್ಯವಿಲ್ಲವೆಂಬ ಸಾಮಾನ್ಯ ಜ್ಞಾನ ಕಮ್ಯುನಿಸ್ಟರಿಗಿಲ್ಲ. ಆಸ್ತಿಯನ್ನು ಸೃಷ್ಟಿಮಾಡಿದರಷ್ಟೇ ಹಂಚಲು ಸಾಧ್ಯ. ಆಸ್ತಿಯನ್ನು ಸೃಷ್ಟಿಮಾಡದೆ ಹಂಚಿದರೆ ಕೊನೆಗೆ ಇಡೀ ರಾಜ್ಯದ ಜನ ಬೀದಿಗೆ ಬರಬೇಕಾಗುತ್ತದೆ. ಕೇರಳ ರಾಜ್ಯದ ಸದ್ಯದ ಆರ್ಥಿಕ ಪರಿಸ್ಥಿತಿ ಯಾವ ಮಟ್ಟಿಗೆ ಹದಗೆಟ್ಟಿದೆಯೆಂದರೆ ಅಲ್ಲಿನ ಸರಕಾರ 'ರಾಜ್ಯ ಸರ್ಕಾರದ ಬಾಂಡ್'ಗಳ ಮೂಲಕ ಜನರ ಬಳಿ ಹಣ ಸಂಗ್ರಹ ಮಾಡುತ್ತಿದೆ. ವಿಪರ್ಯಾಸವೆಂದರೆ ಇವರು ಹದಗೆಡಿಸಿ ಅಧಿಕಾರ ಕಳೆದುಕೊಳ್ಳುತ್ತಾರೆ. ನಂತರದ ಸರಕಾರಗಳು ಆರ್ಥಿಕ ಪರಿಸ್ಥಿಯನ್ನು ಸರಿಮಾಡಲು ಹರಸಾಹಸಪಡುತ್ತವೆ. ಸರಿಪಡಿಸುವ ಸರಕಾರದ ನೀತಿಗಳನ್ನು ಟೀಕಿಸಿಕೊಂಡು ಪುನಃ ಅಧಿಕಾರಕ್ಕೆ ಬರುತ್ತಾರೆ. ಕೇಂದ್ರದಲ್ಲಿ ಕಾಂಗ್ರೆಸ್ ಸರಕಾರ ಹಾಳುಗೆಡವಿದ ಆರ್ಥಿಕ ಪರಿಸ್ಥಿಯನ್ನು ಮೋದಿಯವರು ಸರಿಪಡಿಸುತ್ತಿರುವ ಆರ್ಥಿಕ ನೀತಿಗಳನ್ನು ವಿರೋಧಿಸುವುದು ಕಾಂಗ್ರೆಸ್ ಪಕ್ಷದ ದಿನನಿತ್ಯದ ಕೆಲಸವಾಗಿಹೋಗಿದೆ.

ಬಿಜೆಪಿ, ಕಾಂಗ್ರೆಸ್‌ಗೆ ಸಿದ್ದರಾಮ ಆತಂಕೋತ್ಸವ

ವರ್ತಮಾನ

ಪ್ರದೀಪ್ ಕುಮಾರ್ ಎಂ.

maapala@gmail.com

ಕಳೆದ ಎರಡು-ಮೂರು ದಿನಗಳಿಂದ ರಾಜಕೀಯ ವಲಯದಲ್ಲಿ ಅತಿ ಹೆಚ್ಚು ಚರ್ಚೆಯಾಗುತ್ತಿರುವುದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಜನ್ಮದಿನದ ಅಂಗವಾಗಿ ದಾವಣಗೆರೆಯಲ್ಲಿ ನಡೆದ ಸಿದ್ದರಾಮೋತ್ಸವದ ಯಶಸ್ಸು ಮತ್ತು ಈ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ರಾಜ್ಯ ನಾಯಕರ ಒಗ್ಗಟ್ಟು ಪ್ರದರ್ಶನ. ಈ ಒಗ್ಗಟ್ಟು ಪ್ರದರ್ಶನಕ್ಕೆ ವೇದಿಕೆಯಲ್ಲಿ ರಾಹುಲ್ ಗಾಂಧಿ ಉಪಸ್ಥಿತರಿದ್ದುದು ಕಾರಣವಾಗಿರಬಹುದು. ಆದರೆ, ನೆರೆದ ಜನಸ್ತೋಮ ಮಾತ್ರ ಇತರೆ ಪಕ್ಷದವರಿಗೆ ಮಾತ್ರವಲ್ಲ, ಸ್ವತಃ ಕಾಂಗ್ರೆಸ್ಸಿಗರಲ್ಲೇ ಸಿದ್ದರಾಮಯ್ಯ ಅವರ ಬಗ್ಗೆ ಆತಂಕ ಹೆಚ್ಚುವಂತೆ ಮಾಡಿದ್ದಂತೂ ಸತ್ಯ. ಅದರಲ್ಲೂ ಸಿದ್ದರಾಮೋತ್ಸವದಲ್ಲಿ ಮುಂದಿನ ಮುಖ್ಯಮಂತ್ರಿ ಕುರಿತು ಪ್ರಮುಖರು, ಕಾರ್ಯಕರ್ತರಿಂದ ಸಿದ್ದರಾಮಯ್ಯ ಅವರ ಹೆಸರು ಘೋಷಣೆಯಾಗಿ ಗೊಂದಲ ಸೃಷ್ಟಿಯಾಗಬಹುದು. ಅದರಿಂದ ಕಾಂಗ್ರೆಸ್ಸನ್ನು ಹಣಿಯಲು ಒಂದಷ್ಟು ಸರಕು ಸಿಗಬಹುದು ಎಂದು ಕಾಯುತ್ತಿದ್ದ ಆಡಳಿತಾರೂಢ ಬಿಜೆಪಿ ಭ್ರಮನಿರಸನಗೊಂಡಿದ್ದು ಮಾತ್ರವಲ್ಲ, ನಾಯರಿಗೆ ಎಚ್ಚರಿಕೆಯ ಸಂದೇಶವನ್ನೂ ನೀಡಿದೆ.

ಹೌದು, ಬೆಣ್ಣೆ ನಗರಿ ದಾವಣಗೆರೆಯಲ್ಲಿ ನಡೆದ ಸಿದ್ದರಾಮೋತ್ಸವ ಆಡಳಿತಾರೂಢ ಬಿಜೆಪಿಗೆ ಮಾತ್ರವಲ್ಲ, ಕಾಂಗ್ರೆಸ್‌ಗೂ ಒಂದು ಸಂದೇಶವನ್ನು ನೀಡಿದೆ. ಅದು ಸಿದ್ದರಾಮಯ್ಯ ಅವರ ಶಕ್ತಿ ಮತ್ತು ಜನಪ್ರಿಯತೆ. ಕಾರ್ಯಕ್ರಮಕ್ಕೆ ಜನರನ್ನು ಸೇರಿಸುವುದು ದೊಡ್ಡ ವಿಷಯವೇನೂ ಅಲ್ಲ, ಹಣ ಖರ್ಚು ಮಾಡಿದರೆ ಎಷ್ಟು ಜನರನ್ನು ಬೇಕಾದರೂ ಸೇರಿಸಬಹುದು. ಜನರಿಗೆ ಸಾರಿಗೆ, ಊಟದ ವ್ಯವಸ್ಥೆ ಮಾಡಿ ಕೈಗೆ ಒಂದಷ್ಟು ಹಣ ಇಟ್ಟರೆ ಲಕ್ಷಾಂತರ ಸಂಖ್ಯೆಯಲ್ಲಿ ಜನ ಬರುತ್ತಾರೆ. ಸಿದ್ದರಾಮೋತ್ಸವದಲ್ಲೂ ಅದು ಸ್ವಲ್ಪ ಮಟ್ಟಿಗೆ ಆಗಿರಬಹುದು. ಆದರೆ, ಅಲ್ಲಿ ಸೇರಿದ್ದ ಸಾಕಷ್ಟು ಮಂದಿಯ 'ಬಾಡಿ ಲ್ಯಾಂಗ್ವೇಜ್' ನೋಡಿದರೆ ಅವರೆಲ್ಲರೂ ಕರೆದುಕೊಂಡು ಬಂದವರಲ್ಲ, ತಾವಾಗಿಯೇ ಸಿದ್ದರಾಮಯ್ಯ ಅವರ ಮೇಲಿನ ಅಭಿಮಾನದಿಂದ ಬಂದಿರುವುದು ಕಂಡುಬರುತ್ತದೆ. ಏಕೆಂದರೆ, ಅಲ್ಲಿ ಸಿದ್ದರಾಮಯ್ಯ ಪರ ಘೋಷಣೆಗಳಿತ್ತೇ ಹೊರತು ಅತಿಯಾದ ಓಲೈಕೆ ಕಾಣಿಸುತ್ತಿರಲಿಲ್ಲ.

ಕಾಂಗ್ರೆಸ್ ವಿಚಾರದಲ್ಲಿ, ಪಕ್ಷ ಅಧಿಕಾರದಲ್ಲಿದ್ದರೆ ಮುಖ್ಯಮಂತ್ರಿ ನೇತೃತ್ವದಲ್ಲಿ ಚುನಾವಣೆ ಎದುರಿಸಲಾಗುತ್ತದೆ. ಅಧಿಕಾರದಲ್ಲಿ ಇಲ್ಲದಿದ್ದರೆ ಪಕ್ಷದ ಅಧ್ಯಕ್ಷರ ನೇತೃತ್ವದಲ್ಲಿ ಅರ್ಥಾತ್ ಕೆಪಿಸಿಸಿ ಅಧ್ಯಕ್ಷರ ನೇತೃತ್ವದಲ್ಲಿ ಚುನಾವಣೆ ಎದುರಿಸುವುದು ವಾಡಿಕೆ. ಉದಾಹರಣೆಗೆ 2013ರ ವಿಧಾನಸಭೆ ಚುನಾವಣೆಯನ್ನೇ ತೆಗೆದುಕೊಳ್ಳೋಣ. ಕಾಂಗ್ರೆಸ್ ಗೆದ್ದರೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿತ್ತು. ಆದರೂ ಚುನಾವಣೆ ಎದುರಿಸಿದ್ದು ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಾ.ಜಿ.ಪರಮೇಶ್ವರ್ ನೇತೃತ್ವದಲ್ಲಿ. ಅಂದರೆ, 2023ರ ಚುನಾವಣೆಯನ್ನು ಕೆಪಿಸಿಸಿ ಅಧ್ಯಕ್ಷರ ನೇತೃತ್ವದಲ್ಲಿ ಹಮ್ಮಿಕೊಳ್ಳಬೇಕಿತ್ತು. ಅದರೆ, ಮುಂದಿನ ಚುನಾವಣೆಯನ್ನು ಸಿದ್ದರಾಮಯ್ಯ ಅವರ ನೇತೃತ್ವದಲ್ಲೇ ಎದುರಿಸೋಣ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರೇ ಘೋಷಿಸಿದರು. ಸಿದ್ದರಾಮಯ್ಯ ನೇತೃತ್ವದಲ್ಲಿ ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆ ಎದುರಿಸೋಣ ಎಂದರೆ ಅಲ್ಲಿ ಸೇರಿದ್ದ ಜನಸ್ತೋಮ, ಕಾರ್ಯಕ್ರಮದ ಯಶಸ್ಸು ಯಾವ ಮಟ್ಟಿಗೆ ಸಿದ್ದರಾಮಯ್ಯ ಅವರ ಅನಿವಾರ್ಯತೆಯನ್ನು ಕಾಂಗ್ರೆಸ್‌ಗೆ ತೋರಿಸಿಕೊಟ್ಟಿದೆ ಎಂಬುದು ಸಾಬೀತಾಗುತ್ತದೆ.

ಇನ್ನೂ ಒಂದು ಸಂದೇಶ ಡಿ.ಕೆ.ಶಿವಕುಮಾರ್ ಮತ್ತು ಅವರ ಬೆಂಬಲಿಗರಿಗೆ ಸಿಕ್ಕಿದೆ. ಸಿದ್ದರಾಮೋತ್ಸವ ರೀತಿಯಲ್ಲಿ ಶಿವಕುಮಾರೋತ್ಸವ ಮಾಡಬೇಕು ಎಂದು ಹೇಳುತ್ತಿದ್ದವರಿಗೆ ಎಚ್ಚರಿಕೆಯ ಸಂದೇಶ ಹೋಗಿದೆ. ಒಂದೊಮ್ಮೆ ಸಿದ್ದರಾಮಯ್ಯ ಮತ್ತುಅವರ ಬೆಂಬಲಿಗರಿಗಿಂತ ನಾವೇನು ಕಮ್ಮಿ ಎಂದು ಶಿವಕುಮಾರೋತ್ಸವ ಮಾಡಲು ಹೊರಟರೆ ಅಪಾಯಕ್ಕೆ ಸಿಕ್ಕಿಕೊಳ್ಳಬೇಕಾಗುತ್ತದೆ. ಒಂದೊಮ್ಮೆ ಬೆಂಬಲಿಗರ ಬಲವಂತಕ್ಕೆ ಶಿವಕುಮಾರ್ ಒಪ್ಪಿ, ಶಿವಕುಮಾರೋತ್ಸವ ನಡೆಸಲು ಒಪ್ಪಿದರೆ, ಆ ಕಾರ್ಯಕ್ರಮ ನಡೆದು ಸಿದ್ದರಾಮೋತ್ಸವದಷ್ಟು ಯಶಸ್ವಿ ಆಗದೇ ಇದ್ದರೆ ಅಲ್ಲಿಗೆ ಡಿ.ಕೆ.ಶಿವಕುಮಾರ್ ಸೋತರೆಂದೇ ಅರ್ಥ. ಹೀಗಾಗಿ ಶಿವಕುಮಾರೋತ್ಸವದ ಮೂಲಕ ತಮ್ಮ ನಾಯಕನನ್ನು ಆರಾಧಿಸಲು ಹೊರಟವರಿಗೆ ಸಿದ್ದರಾಮೋತ್ಸವ ಎಚ್ಚರಿಕೆಯ ಗಂಟೆಯಾಗಿದೆ. ಈ ಯಶಸ್ಸನ್ನು ನೋಡಿ ಅವರಾರೂ ಇನ್ನು ಶಿವಕುಮಾರೋತ್ಸವ ಮಾಡುವ ಬಗ್ಗೆ ಯೋಚಿಸುವುದೂ ಕೂಡ ಎಂದು ಕಾಣಿಸುತ್ತದೆ.

ಬಿಜೆಪಿ ವಿಚಾರಕ್ಕೆ ಬಂದರಂತೂ ಸಿದ್ದರಾಮೋತ್ಸವ, ಪಕ್ಷಕ್ಕೆ ಹಲವು ಎಚ್ಚರಿಕೆ ನೀಡಿದೆ. ಹೋದಲ್ಲೆಲ್ಲಾ ಟೀಕಿಸುತ್ತಾ, ಸಾಮಾಜಿಕ ಜಾಲತಾಣಗಳಲ್ಲಿ ಅವರ ವಿರುದ್ಧ ಪೋಸ್ಟ್ ಹಾಕುತ್ತಾ ಇದ್ದರೆ ಸಿದ್ದರಾಮಯ್ಯ ಅವರ ಜನಪ್ರಿಯತೆ, ಶಕ್ತಿಯನ್ನು ಕಡಿಮೆ ಮಾಡಲು ಸಾಧ್ಯವಿಲ್ಲ. ಅವರ ಶಕ್ತಿ ಕಡಿಮೆ ಮಾಡಬೇಕಾದರೆ ಸಂಘಟನೆ ಬಲಪಡಿಸಬೇಕು. ಅದಕ್ಕಾಗಿ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಇತರೆ ನಾಯಕರಂತೆ ಸಿದ್ದರಾಮಯ್ಯ ಕೂಡ ಒಬ್ಬ ನಾಯಕ ಅಲ್ಲ, ಅವರ ಹಿಂದೆ ಬೆಂಬಲಿಗರ ಪಡೆಯೇ ಇದೆ. ಅದರಲ್ಲೂ ಕುರುಬ ಸಮುದಾಯ ತಮ್ಮ ನಾಯಕನನ್ನಾಗಿ ಪೂರ್ಣ ಪ್ರಮಾಣದಲ್ಲಿ ಒಪ್ಪಿಕೊಂಡಿದ್ದಾರೆ. ಇವರೊಂದಿಗೆ ಇತರೆ ಹಿಂದುಳಿದ ವರ್ಗದವರೂ ಇದ್ದಾರೆ. ಈ ಸಮುದಾಯದ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕೆಂಬ ಸಂದೇಶವನ್ನು ಬಿಜೆಪಿಗೆ ನೀಡಿದೆ.

ಸಿದ್ದರಾಮಯ್ಯ ಅವರ ಜನ್ಮದಿನವನ್ನು ಅವರ ಬೆಂಬಲಿಗರು ಸಿದ್ದರಾಮೋತ್ಸವ ಎಂದು ಆಚರಿಸುವುದಾಗಿ ಘೋಷಿಸಿದ ಬಳಿಕ ಬಿಜೆಪಿ ನಾಯಕರು ಆ ಬಗ್ಗೆ ಟೀಕಿಸುತ್ತಲೇ ಇದ್ದರು. ಇಲ್ಲಿ ವ್ಯಕ್ತಿ ಪೂಜೆ ನಡೆಯುತ್ತಿದೆ. ಜನರು ವ್ಯಕ್ತಿಪೂಜೆಯನ್ನು ಬೆಂಬಲಿಸುವುದಿಲ್ಲ ಎನ್ನುತ್ತಿದ್ದರು. ರಾಜ್ಯದಲ್ಲಿ ಮಳೆ, ಪ್ರವಾಹ ಬಂದು ಜನತೆ ಸಂಕಷ್ಟದಲ್ಲಿರುವಾಗ ಇಂತಹ ಉತ್ಸವಗಳು ಬೇಕಿತ್ತಾ ಎಂದು ಪ್ರಶ್ನಿಸಿದ್ದರು. ಈ ಎಲ್ಲದಕ್ಕೂ ಸಿದ್ದರಾಮೋತ್ಸವ ಉತ್ತರ ನೀಡಿದೆ. ಒಂದು ಹಂತದಲ್ಲಿ ಬಿಜೆಪಿಯ ಈ ಟೀಕೆ ಸಿದ್ದರಾಮಯ್ಯ ಅವರ ಬೆಂಬಲಿಗರನ್ನು ತಟ್ಟಿದೆ.

ಕಾಂಗ್ರೆಸ್ ಮತ್ತು ಸಿದ್ದರಾಮಯ್ಯ ವಿರುದ್ಧ ಟೀಕೆ, ವ್ಯಂಗ್ಯಗಳಿಗೆ ಸಿದ್ದರಾಮೋತ್ಸವದಲ್ಲಿ ಒಂದಷ್ಟು ಸರಕು ಸಿಗಬಹುದು ಎಂಬ ಬಿಜೆಪಿಯ ನಿರೀಕ್ಷೆಯೂ ಸುಳ್ಳಾಗಿದೆ. ರಾಹುಲ್ ಗಾಂಧಿ ಸೂಚನೆ ಕೊಟ್ಟ ಮೇಲೆ ಸಿದ್ದರಾಮಯ್ಯ ಅವರನ್ನು ಡಿ.ಕೆ.ಶಿವಕುಮಾರ್ ತಬ್ಬಿಕೊಂಡಿದ್ದರಿಂದ ಇದು ನಕಲಿ ಒಗ್ಗಟ್ಟು ಎಂದು ಟೀಕಿಸಲು, ರಾಹುಲ್ ಗಾಂಧಿ ಭಾಷಣವನ್ನು ಕನ್ನಡಕ್ಕೆ ತರ್ಜುಮೆ ಮಾಡುವ ವೇಳೆ ಆದ ಅವಾಂತರಗಳು, ರಾಹುಲ್ ತೀರ್ಥ ತೆಗೆದುಕೊಳ್ಳುವ ವೀಡಿಯೋಗಳಂಥ ಸಣ್ಣ ಪುಟ್ಟ ಅವಾಂತರಗಳು ಮಾತ್ರ ಸಿಕ್ಕಿವೆಯೇ ಹೊರತು ಸಿದ್ದರಾಮಯ್ಯ ವರ್ಚಸ್ಸಿಗೆ ಧಕ್ಕೆಯಾಗುವ ಯಾವೊಂದು ಬೆಳವಣಿಗೆ ನಡೆಯಲಿಲ್ಲ.

ಸಿದ್ದರಾಮೋತ್ಸವದ ಬಗ್ಗೆ ಬಿಜೆಪಿಯವರು ಏನೇ ಟೀಕೆ ಮಾಡುತ್ತಿರಲಿ, ಅವರಲ್ಲಿ ಆತಂಕ ಮೂಡಿದ್ದಂತೂ ಸತ್ಯ ಎಂಬುದು ಕಳೆದ ಎರಡು-ಮೂರು ದಿನಗಳ ಬೆಳವಣಿಗೆಗಳಿಂದ ಗೊತ್ತಾಗುತ್ತಿದೆ. ಕಾರ್ಯಕ್ರಮದ ಯಶಸ್ಸು, ಅಲ್ಲಿ ಸೇರಿದ್ದ ಜನರ ಬಗ್ಗೆಯೇ ನಾಯಕರ ಮಟ್ಟದಲ್ಲಿ ಸಮಾಲೋಚನೆಗಳು ನಡೆಯುತ್ತಿವೆ. ಸಿದ್ದರಾಮಯ್ಯ ವಿರುದ್ಧದ ವೈಯಕ್ತಿಕ ಟೀಕೆಗಳೂ ಕಡಿಮೆಯಾಗಿವೆ. ಎಲ್ಲಕ್ಕಿಂತ ಮುಖ್ಯವಾಗಿ ಚುನಾವಣಾ ಚಾಣಕ್ಯ ಅಮಿತ್ ಶಾ ಬೆಂಗಳೂರಿಗೆ ಬಂದಿದ್ದಾಗಲೂ ಅವರೊಂದಿಗೆ ಸಿದ್ದರಾಮೋತ್ಸವದ ಬಗ್ಗೆ ಚರ್ಚೆಯಾಗಿದೆ ಎಂದರೆ ಪಕ್ಷದ ನಾಯಕರು ಎಷ್ಟು ಆತಂಕಗೊಂಡಿದ್ದಾರೆ ಎಂಬುದು ಗೊತ್ತಾಗುತ್ತದೆ.

ಹೀಗಾಗಿ ಬಿಜೆಪಿ ಈಗ ತನ್ನ ರಾಜಕೀಯ ರಣತಂತ್ರಗಳಲ್ಲಿ ಪರಿವರ್ತನೆ ಮಾಡಿಕೊಳ್ಳಲು ಯೋಚಿಸುವಂತಾಗಿದೆ. ಕೇವಲ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಪಕ್ಷವನ್ನು ಟೀಕಿಸುತ್ತಾ, ಬಿಜೆಪಿ ಮತ್ತು ಸರಕಾರದ ಆಡಳಿತವನ್ನು ಸಮರ್ಥಿಸಿಕೊಳ್ಳುತ್ತಾ ಕಾಲ ಕಳೆದರೆ ಅದರಿಂದ ಪ್ರಯೋಜನವಿಲ್ಲ. ಉತ್ತಮ ಕಾರ್ಯಕ್ರಮಗಳ ಮೂಲಕ ಜನರನ್ನು ತಲುಪಬೇಕು. ಕಾರ್ಯಕರ್ತರಿಗೆ ಉತ್ಸಾಹ ತುಂಬಿ ಪಕ್ಷ ಸಂಘಟನೆ ಮಾಡಲೇಬೇಕು ಎಂಬ ನಿಟ್ಟಿನಲ್ಲಿ ಕಾರ್ಯತಂತ್ರಗಳನ್ನು ರೂಪಿಸಬೇಕಾದ ಅನಿವಾರ್ಯವನ್ನು ಸೃಷ್ಟಿಸಿದೆ.

ಹಾಗೆಂದು ಬಿಜೆಪಿ ಹೆದರಿಕೊಂಡಿದೆ ಎಂದರೆ ಅದಕ್ಕಿಂತ ದೊಡ್ಡ ಜೋಕ್ ಬೇರೊಂದಿಲ್ಲ. ಏಕೆಂದರೆ, ಆ ಪಕ್ಷಕ್ಕೆ ತಳ ಮಟ್ಟದಲ್ಲಿ ಸಂಘ ಪರಿವಾರದ ಶಕ್ತಿ ಇದೆ. ಮೇಲಿನ ಹಂತದಲ್ಲಿ ಅಮಿತ್ ಶಾ, ನರೇಂದ್ರ ಮೋದಿ, ಜೆ.ಪಿ.ನಡ್ಡಾ, ಭೂಪೇಂದ್ರ ಯಾದವ್ ಅವರಂತಹ ಚುನಾವಣಾ ತಂತ್ರಗಾರಿಕೆಯ ದೊಡ್ಡ ತಂಡವೇ ಇದೆ. ರಾಜ್ಯದಲ್ಲೂ ಬಿ.ಎಸ್.ಯಡಿಯೂರಪ್ಪರಂಥ ಜನ ನಾಯಕರಿದ್ದಾರೆ. ಬಹುಷಃ ಸಿದ್ದರಾಮಯ್ಯ ಅವರನ್ನು ಎದುರಿಸಬೇಕಾದರೆ ಈಗ ಯಡಿಯೂರಪ್ಪ ಅವರ ಸಂಪೂರ್ಣ ಸಹಕಾರ ಬೇಕೇ ಬೇಕು. ಜತೆಗೆ ವರಿಷ್ಠರು ರೂಪಿಸುವ ಕಾರ್ಯತಂತ್ರವನ್ನು ಅನುಷ್ಠಾನಕ್ಕೆ ತರುವಂತಹ ಎರಡನೇ ಹಂತದ ನಾಯಕರನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ರಾಜ್ಯ ಬಿಜೆಪಿಯಲ್ಲಿರುವ ನಾಯಕರು ವೈಯಕ್ತಿಕ ಪ್ರತಿಷ್ಠೆ, ಇನ್ನೊಬ್ಬ ನಾಯಕನ ವಿರುದ್ಧ ಇರುವ ಅಸಮಾಧಾನವನ್ನು ಬದಿಗಿಟ್ಟು ಕೆಲಸ ಮಾಡಬೇಕು. ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗಬೇಕು. ಆ ನಿಟ್ಟಿನಲ್ಲಿ ಬಿಜೆಪಿಯ ರಾಜ್ಯ ನಾಯಕರು ಹೇಗೆ ಹೆಜ್ಜೆ ಇಡುತ್ತಾರೆ ಎಂಬುದನ್ನು ಕಾದು ನೋಡಬೇಕು.

ಲಾಸ್ಟ್ ಸಿಪ್: ಎದುರಾಳಿ ಸಮರ್ಥನಿದ್ದಾಗ ಆತನ ವಿರುದ್ಧ ಹೋರಾಟದಲ್ಲಿ ಗೆಲ್ಲಬೇಕಾದರೆ ಸಮರ್ಥರನ್ನೇ ಮುಂದೆ ಬಿಡಬೇಕು.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಕರ್ನಾಟಕ ಸಂಸ್ಕೃತ ವಿವಿ ಹಗರಣಗಳು

ನಾನು ಇಲ್ಲಿ ಪ್ರಸ್ತುತ ಪಡಿಸಲು ಹೊರಟಿಸಿರುವ ಸಂಗತಿ ನಿಜಕ್ಕೂ ಅತ್ಯಂತ ಗಂಭೀರ ಸ್ವರೂಪದ್ದಾಗಿದೆ. ಸಾಮಾನ್ಯವಾಗಿ 'ಸಂಸ್ಕೃತ' ಪದವನ್ನ ಕೇಳಿದೊಡನೆಯೇ ನಮ್ಮ ಮನಸ್ಸಿನಲ್ಲಿ ಮೂಡುವ ಭಾವ ನಮ್ಮ ಸಂಸ್ಕೃತಿ, ಅದನ್ನು ಬಿಂಬಿಸುವ ಅನೇಕ ಕೃತಿಗಳು. ಆ ವಿಷಯವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿರುವ ಪರಮ ಪಂಡಿತರು. ಹಾಗೆಯೇ 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಲಯದ' ಬಗ್ಗೆಯೂ ನಾನು ಅತ್ಯಂತ ಸಕಾರಾತ್ಮಕವಾದ ಅಭಿಪ್ರಯವನ್ನು ಹೊಂದಿದ್ದೆ. ಇಲ್ಲಿನ ಪ್ರಾಧ್ಯಾಪಕರುಗಳ ಬಗ್ಗೆ, ಸಂಸ್ಕೃತವನ್ನು ವಿಶ್ವದೆಲ್ಲೆಡೆಯೂ ಪಸರಿಸುವ ಬಗ್ಗೆ ಅವರಿಗಿರಬಹುದಾದ ಕಾಳಜಿಯ ಬಗ್ಗೆ ನನಗೆ ತುಂಬಾ ಭರವಸೆ ಇದ್ದಿತು.

ನಾನು 2019-20 ರಲ್ಲಿ ಎಂ.ಎ ವ್ಯಾಕರಣ ವಿಭಾಗದಲ್ಲಿ ಅಧ್ಯಯನಕ್ಕಾಗಿ ನೋಂದಾಯಿಸಿಕೊಂಡ ಬಳಿಕ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿನ ನೈಜ ಚಿತ್ರಣ ನನ್ನೆದುರು ಸಾಕಾರಗೊಳ್ಳತೊಡಗಿತು. ಇಲ್ಲಿನ ಪ್ರಾಧ್ಯಾಪಕರುಗಳು ಪಾಠ/ಪ್ರವಚನಗಳನ್ನು ಸರಿಯಾಗಿ ಮಾಡದೇ ತಮ್ಮ ತಮ್ಮ ಗುಂಪನ್ನು ಪೋಷಿಸುವುದರಲ್ಲೇ ಮಗ್ನರಾಗಿರುವುದು ಕಂಡುಬಂತು.

ನಮ್ಮ ಪ್ರಥಮ ಷಣ್ಮಾಸಿಕದ ಆಂಭದಲ್ಲಿಯೇ ಇದು ದೃಢಪಟ್ಟಿತು. ಪಾಠ/ಪ್ರವಚನಗಳನ್ನು ಸರಿಯಾಗಿ ನಿಯಮಿತವಾಗಿ ಮಾಡದೇ ಇದ್ದಾಗ ನಾನು ಪ್ರಾಧ್ಯಾಪಕರನ್ನು ಸಂಪರ್ಕಿಸಿ ನಿಯಮಿತವಾಗಿ ನೆರವೇರಿಸಲು ಕೋರಿದಾಗ ಅವರ ಪ್ರತ್ಯುತ್ತರ 'ನಾವು ಎಷ್ಟು ಪಾಠ ಮಾಡುತ್ತೇವೆಯೋ ಅಷ್ಟೇ ಪರೀಕ್ಷೆಗೆ ಬರುತ್ತದೆ' ಇದು ನಿಜಕ್ಕೂ ಆಶ್ಚರ್ಯಕರವಾದದ್ದು! ಅಂಥ ಪ್ರಾಧ್ಯಾಪಕರುಗಳ ನಿಜರೂಪ ಬಯಲಾಗಿದ್ದು ಇಲ್ಲಿಯೇ. ಇಂಥವರ ಜತೆಗೆ, ಕುಲಸಚಿವ ಮತ್ತು ಮಾಜಿ ಕುಲಪತಿ ಇಂಥವರೆಲ್ಲ ಸೇರಿ ವಿದ್ಯಾರ್ಥಿಗಳ ದಾರಿತಪ್ಪಿಸುತ್ತಿರುವುದು ಸುಳ್ಳಲ್ಲ.

ಪರೀಕ್ಷೆಯಲ್ಲಿ ಟೈಮ್‌ಪಾಸ್ ಮಾಡಿ ಸರಿಯಾಗಿ ಬರೆಯದೆ ಇದ್ದವರಿಗೂ 75% ಗಿಂತ ಹೆಚ್ಚು ಅಂಕಗಳನ್ನು ಕೊಟ್ಟಿರುತ್ತಾರೆ. ಆದರೆ, ಪಾಠ ಮಾಡಿ ಎಂದು ವಿನಂತಿಸಿಕೊಂಡಿದ್ದಕ್ಕೆ, ಆಂತರಿಕ ಪರೀಕ್ಷೆಯಲ್ಲಿ 25 ಕ್ಕೆ 23 ಅಂಕ ಪಡೆದರೂ ಇವರು ಫಲಿತಾಂಶದಲ್ಲಿ ನೀಡಿದ್ದು 30ಕ್ಕೆ 20 ಅಂಕ ಮಾತ್ರ.

ಇಂಥ ಫಲಿತಾಂಶದ ಬಗ್ಗೆ ಸಂಬಂಧ ಪಟ್ಟ ಅಧಿಕಾರಿ ವರ್ಗದಿಂದ ಹಿಡಿದು ಅಂದಿನ ಹಂಗಾಮಿ ಕುಲಪತಿಯಾಗಿದ್ದ ಗಿರೀಶ್ ಚಂದ್ರ, ಪ್ರಸ್ತುತ ಕುಲಪತಿಗಳಾದ ಕೆ.ಇ. ದೇವನಾಥನ್ ಇನ್ನೂ ಅನೇಕರಿಗೆ ಮುಖತಃ ಭೇಟಿಯಾಗಿ ದೂರು ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ. ನನಗಾದ ಅನ್ಯಾಯಕ್ಕೆ ಯಾರೂ ಉತ್ತರ ದೊರಕಿಸಲಿಲ್ಲ. ಇದೇ ರೀತಿ ಪ್ರತೀ ಸೆಮಿಸ್ಟರ್‌ನಲ್ಲಿಯೂ ಆಗಿದೆ. ನಾನು ಯುಜಿಸಿಗೂ ಪತ್ರ ಬರೆದಿದ್ದರೂ ಯಾವುದೇ ರೀತಿಯ ಉತ್ತರ ಸಿಕ್ಕಿಲ್ಲ, ಹಾಗೆ ರಾಜ್ಯದ ಉನ್ನತ ಶಿಕ್ಷಣ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿಯಾದ ಜಿ.ಕುಮಾರ್ ನಾಯಕ ಇವರಿಗೂ ಮುಖತಃ ಭೇಟಿ ಮಾಡಿ ವಿನಂತಿಸಿರುತ್ತೇನೆ. ಆದರೆ, ಯಾವುದೂ ಫಲಪ್ರದಾಯಕವಾಗಿಲ್ಲ.

ಈ ಎಲ್ಲ ಬೆಳವಣಿಗೆಯು ಸಂಸ್ಕೃತ ವಿವಿಗೆ ತುಂಬಾ ಅಪಾಯಕಾರಿಯಾಗಿದ್ದು, ಇಂಹ ಬೆಳವಣಿಗೆಗಳಿಂದ ನನ್ನಂತಹ ನೂರಾರು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಸಂಸ್ಕೃತ ವಿವಿಯಲ್ಲಿ ನಡೆಯುತ್ತಿರುವ ಹಗರಣಗಳ ಬಗ್ಗೆ ನಮ್ಮ ಮುಂದೆ ತೆರೆದಿಟ್ಟಿರುತ್ತೇನೆ. ಈ ಮೇಲೆ ನಮೂದಿಸಿರುವ ಎಲ್ಲದಕ್ಕೂ ನನ್ನ ಹತ್ತಿರ ಪತ್ರದಲ್ಲಿ ವ್ಯವಹರಿಸಿದ ಸಾಕ್ಷ್ಯಾಧಾರಗಳು ಇವೆ. ಸಂಬಂಧಿಸಿದವರು ತಕ್ಷಣ ಎಚ್ಚೆತ್ತು ರಾಜ್ಯದ ಅಪೂರ್ವ ವಿಶ್ವವಿದ್ಯಾಲಯವೊಂದರ ಸ್ಥಾಪನೆಯ ಉದ್ದೇಶ ಸಾರ್ಥಕಗೊಳಿಸಬೇಕು.

-**ಅನಂತ ಐತಾಳ** ಬೆಂಗಳೂರು

ಸಾಮರಸ್ಯವಿಲ್ಲದ ಡಬಲ್ ಎಂಜಿನ್ ಸರಕಾರಗಳು

ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಅಭಿವೃದ್ಧಿಯಲ್ಲಿ ಸದಾ ಮುಂದೆ ಎಂದು ಹೇಳಿಕೊಳ್ಳುವ ಡಬಲ್ ಎಂಜಿನ್ ಸರಕಾರಗಳು ಅವಳಿ ನಗರಗಳಾದ ಹುಬ್ಬಳ್ಳಿ-ಧಾರವಾಡದಲ್ಲಿ ಒಂದಕ್ಕೊಂದು ಸಂಬಂಧವೇ ಇಲ್ಲದ ರಿತಿಯಲ್ಲಿವೇ.

ಕೇಂದ್ರ ಸರಕಾರದ ನಿಯಂತ್ರಣದಲ್ಲಿರುವ ರೈಲುಗಳನ್ನು ನಸುಕಿನ ಜಾವ ಬೆಳಗ್ಗೆಯೇ ಪ್ರಾರಂಭವಾಗುತ್ತವೆ. ಆದರೆ ಆ ರೈಲನ್ನು ಸಮಯಕ್ಕೆ ಸರಿಯಾಗಿ ಕ್ಯಾಚ್ ಮಾಡಲು ರಾಜ್ಯ ಸರಕಾರದ ವತಿಯಿಂದ ಸಮರ್ಪಕವಾದ ಬಸ್ ವ್ಯವಸ್ಥೆ ಇಲ್ಲ.

ಪ್ರತಿದಿನ ಧಾರವಾಡದಿಂದ ಬೆಂಗಳೂರಿಗೆ ಪ್ರಯಾಣಿಸುವ ಸಿದ್ದಗಂಗಾ ಎಕ್ಸ್‌ಪ್ರೆಸ್ (ಇಂಟರ್ ಸಿಟಿ) ರೈಲು ಧಾರವಾಡದಲ್ಲಿ ಬೆಳಗ್ಗೆ 5:15 ಕ್ಕೆ ಪ್ರಾರಂಭವಾಗಿ ಹುಬ್ಬಳ್ಳಿಯಿಂದ 6 ಗಂಟೆಗೆ ಹೊರಡುತ್ತದೆ. ಈ ರೈಲಿನಲ್ಲಿ ಅದೆಷ್ಟೋ ಜನ ಪ್ರಯಾಣ ಮಾಡುತ್ತಾರೆ. ಅದರಲ್ಲಿ ಕೆಲವರು ರೈಲು ನಿಲ್ದಾಣ ತಲುಪಲು ಸ್ವಂತ ವಾಹನ ಹೊಂದಿರಬಹುದು. ಆದರೆ ಹಲವರು ಕಾಲ್ನಡಿಗೆಯಲ್ಲಿಯೇ ದೂರದ ಸ್ಟೇಷನ್‌ಗೆ ಹೋಗುವ ಪರಿಸ್ಥಿತಿ ಇದೆ. ಏಕೆಂದರೆ, ಕೆಎಸ್‌ಆರ್‌ಟಿಸಿ ಅಥವಾ ಬಿಆರ್‌ಟಿಸಿ ವತಿಯಿಂದ ಸರಿಯಾದ ಬಸ್ ಸೌಕರ್ಯವಿಲ್ಲ. ಇನ್ನೂ ಆಟೋವನ್ನು ಅವಲಂಬಿಸಿ ಹೋಗಬೇಕೆಂದರೆ ಆಟೋ ಚಾಲಕರು ಸಹ ಗ್ರಾಹಕರ ಅವಶ್ಯಕತೆಯನ್ನೆ ಬಂಡವಾಳ ಮಾಡಿಕೊಂಡು ಬಾಯಿಗೆ ಬಂದಂತೆ ಸುಲುಗೆ ಮಾಡುತ್ತಾರೆ. ಇದಲ್ಲದೆ ಬೆಳಗ್ಗೆ ಬೇಗನೆ ಎದ್ದು ಚೆನ್ನಮ್ಮ ಸರ್ಕಲ್‌ನಿಂದ ನಡೆದುಕೊಂಡು ಹೋಗೋಣ ಎಂದರೇ ಮಹಾನಗರ ಪಾಲಿಕೆ ದಾಟಿದ ನಂತರ ನಿರ್ಜನ ಪ್ರದೇಶವಿದ್ದು, ಸೂರ್ಯೋದಯದವರೆಗೂ ಹೇದರಿಕೆ ಕಳ್ಳರ ಬೆದರಿಕೆಯಿಂದ ಕೂಡಿದ ವಾತಾವರಣವಿರುತ್ತದೆ.

ಕೇಂದ್ರ ಸರಕಾರದಲ್ಲಿ ಪ್ರಭಲ ನಾಯಕರೆಂದು ಕರೆಸಿಕೊಳ್ಳುವ ಪ್ರಹಲ್ಲಾದ ಜೋಶಿ ಕ್ಷೇತ್ರದಲ್ಲಿಯೇ ಈ ಸ್ಥಿತಿ ಇದ್ದರೆ ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರದ ನಡುವೆ ಸಮನ್ವಯವಿದೆ ಎಂದು ಹೇಗೆ ನಂಬಲು ಸಾಧ್ಯ..? ಅಷ್ಟೇ ಅಲ್ಲ ಹುಬ್ಬಳ್ಳಿ-ಧಾರವಾಡವನ್ನು ದೊಡ್ಡದಾಗಿ ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳುವ ಹಲವು ಬಿಜೆಪಿ ಶಾಸಕರಿರುವ ಜತೆಗೆ ಮಾಜಿ ಸಿಎಂ ಇರುವ ಕ್ಷೇತ್ರ ಇದಾಗಿದೆ. ಆದ್ದರಿಂದ, ಇದಕ್ಕೆ ಸಂಬಂಧಪಟ್ಟವರು ಬೆಳಗಿನ ರೈಲುಗಳನ್ನು ಸರಿಯಾದ ಸಮಯಕ್ಕೆ ಹಿಡಿದು ಸುಖಕರ ಪ್ರಯಾಣ ಮಾಡಲು ಅನುಕಲವಾಗುವಂತೆ ಸಾರಿಗೆ ವ್ಯವಸ್ಥೆ ಕಲ್ಪಿಸಿದರೆ ಅದೆಷ್ಟೋ ಜನಸಾಮಾನ್ಯರ ಸಮಸ್ಯೆ ಬಗೆಹರಿಯುತ್ತದೆ.

-**ರುದ್ರಯ್ಯ** ಧಾರವಾಡ

ಸ್ವಾತಂತ್ರ್ಯೋತ್ಸವಕ್ಕೆ ರಜೆ ಬೇಡ

ದೇಶಕ್ಕೆ ಸ್ವಾತಂತ್ರ್ಯ ಬಂದು ಎಪ್ಪತ್ತೈದು ವರ್ಷಗಳಾದ ಸಂಬಂಧ 'ಅಮೃತ ಮಹೋತ್ಸವ' ಆಚರಣೆ ಮಾಡುತ್ತಿದ್ದೇವೆ. ಪ್ರತಿ ಭಾರತೀಯರೂ ಈ ಮಹೋತ್ಸವದಲ್ಲಿ ಸ್ವಯಂಪ್ರೇರಿತರಾಗಿ ಭಾಗವಹಿಸಿ ಮನೆಯ ಹಬ್ಬದಂತೆ ಆಚರಿಸಬೇಕೆಂಬುದು ಸರಕಾರದ ಆಶಯವೂ ಆಗಿದೆ. ಆ.13 ರಿಂದ ಮೂರುದಿನ ಎಲ್ಲರ ಮನೆಗಳ ಮೇಲೆ 'ಹರ್ ಘರ್ ತಿರಂಗಾ' ಅಭಿಯಾನದಡಿ ತ್ರಿವರ್ಣ ಧ್ವಜ ಹಾರಿಸಲು ಆದೇಶವೂ ಆಗಿದೆ. ಸ್ವಾತಂತ್ರ್ಯದ ಸಂಭ್ರಮಾಚರಣೆಯನ್ನು ತುಂಬ ಅರ್ಥಗರ್ಭಿತವಾಗಿ ಅತ್ಯಂತ ಸಡಗರ ಉತ್ಸಾಹಗಳಿಂದ ಆಚರಿಸಬೇಕು. ಈ ದಿಸೆಯಲ್ಲಿ ಉತ್ತರ ಪ್ರದೇಶ ಸರಕಾರ ಅಂದು ಸರಕಾರಿ ರಜೆಯನ್ನು ರದ್ದುಪಡಿಸಿ ಅಲ್ಲಿನ ಸರಕಾರಿ ಕಚೇರಿಗಳು ಪೂರ್ಣ ಪ್ರಮಾಣದಲ್ಲಿ ಹಾಜರಿದ್ದು ಧ್ವಜಾರೋಹಣ ಮತ್ತಿತರ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳಲು ಆದೇಶ ಮಾಡಿದೆ. ಈ ಕ್ರಮವು ನಿಜಕ್ಕೂ ಪ್ರಶಂಸನೀಯ. ಸ್ವಾತಂತ್ರ್ಯಾಚರಣೆಯು ಪಾಲ್ಗೊಳ್ಳುವಿಕೆಯನ್ನೇ ಕಳೆದುಕೊಳ್ಳುತ್ತದೆ. ಹೀಗಾಗಿ ದೇಶಭಕ್ತಿಯ ಉದ್ದೇಶ ಸಾಫಲ್ಯ ಗೊಳ್ಳಲು ಮತ್ತು ಅಮೃತಮಹೋತ್ಸವ ಯಶಸ್ವಿಯಾಗಲು ಆಗಸ್ಟ್ 15ರಂದು ಸರಕಾರಿ ರಜೆ ರದ್ದುಪಡಿಸುವುದು ಸಮಂಜಸ ನಿರ್ಧಾರ. ಸರ್ಕಾರದ ನಿಲುವು ನಿರೀಕ್ಷಿಸೋಣವೇ?

-**ಜಿ.ಎಚ್. ಸಂಕಪ್ಪ** ಚನ್ನಗಿರಿ